# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂವಿ/ಕುಸ/ಸಿಂಡಿ/62/ಎಸ್2/2025/109884

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ-574199
ದಿನಾಂಕ: 17.10.2025

ರಿಗೆ:

**ಶೈಕ್ಷಣಿಕ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ.**

ಮಾನ್ಯರೇ,

ವಿಷಯ: ದಿನಾಂಕ 09.10.2025ರಂದು ನಡೆದ ಶೈಕ್ಷಣಿಕ ಮಂಡಳಿಯ 2025-26ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಯ ಬಗ್ಗೆ.

------

ದಿನಾಂಕ 09.10.2025 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2025-26ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಯನ್ನು ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ನಡವಳಿಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ 15 ದಿನಗಳೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

17/10.

ಕುಲಸಚಿವರು.

ಪ್ರತಿಗಳು:

1. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001 - ಇವರ ಗಮನಕ್ಕೆ.
2. ಸರಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

# ಮಂಗಳೂರು ವಿಶ್ವವಿದ್ಯಾನಿಲಯ

## ದಿನಾಂಕ 09.10.2025ರಂದು 11.00 ಗಂಟೆಗೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2025-2026ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು

**ಉಪಸ್ಥಿತ ಸದಸ್ಯರು :**

| | | |
|---|---|---|
| 1. | ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | ಶ್ರೀಮತಿ ಸುಚಿತ್ರಾ | - " - |
| 4. | ಪ್ರೊ. ಜಯರಾಜ್ ಅಮೀನ್ | - " - |
| 5. | ಪ್ರೊ. ವಿಶಾಲಾಕ್ಷಿ ಬಿ. | - " - |
| 6. | ಪ್ರೊ. ಬೋಜ ಪೂಜಾರಿ | - " - |
| 7. | ಪ್ರೊ. ಪರಿಣಿತ | - " - |
| 8. | ಪ್ರೊ. ಪುಟ್ಟಣ್ಣ ಕೆ. | - " - |
| 9. | ಪ್ರೊ. ಮಂಜಯ್ಯ ಡಿ.ಹೆಚ್. | - " - |
| 10. | ಕು. ಪೃಥ್ವಿ ದೀಕ್ಷಾ | - " - |
| 11. | ಗ್ರಂಥಪಾಲಕರು | - " - |

.........2

| | | |
|---|---|---|
| 12. | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನೆ | ಸದಸ್ಯರು |
| 13. | ನಿರ್ದೇಶಕರು<br>ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ | - " - |
| 14. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | - " - |
| 15. | ಕುಲಸಚಿವರು (ಪರೀಕ್ಷಾಂಗ) | - " - |
| 16. | ಹಣಕಾಸು ಅಧಿಕಾರಿ | - " - |
| 17. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತ ಸದಸ್ಯರು :**

| | | |
|---|---|---|
| 1. | ತಾಂತ್ರಿಕ ಶಿಕ್ಷಣ ನಿರ್ದೇಶಕರು | ಸದಸ್ಯರು |
| 2. | ಡಾ. ಮಂತರ್ ಗೌಡ, ಎಂ.ಎಲ್.ಎ. | - " - |
| 3. | ಶ್ರೀ ಅಶೋಕ್ ಕುಮಾರ್ ರೈ, ಎಂ.ಎಲ್.ಎ. | - " - |
| 4. | ಶ್ರೀ ಗುರ್ಮೆ ಸುರೇಶ್ ಶೆಟ್ಟಿ, ಎಂ.ಎಲ್.ಎ. | - " - |
| 5. | ಶ್ರೀ ಮಧು ಜಿ. ಮಾದೇಗೌಡ, ಎಂ.ಎಲ್.ಸಿ. | - " - |
| 6. | ಶ್ರೀ ಮಂಜುನಾಥ್ ಭಂಡಾರಿ, ಎಂ.ಎಲ್.ಸಿ. | - " - |

| | | |
|---|---|---|
| | | ಸದಸ್ಯರು |
| 7. | ಡಾ. ಸತೀಶ್ ಕೆ. | |
| | | - " - |
| 8. | ಶ್ರೀ ನಿಹಾರ್ ಎನ್. ಗಾವ್ಕರ್ | |
| | | - " - |
| 9. | ಶ್ರೀ ಹೃಷಿಕೇಶ್ | |
| | | - " - |
| 10. | ಶ್ರೀ ಸಂಜಯ್ ಎಂ.ಶೆಟ್ಟಿ | |
| | | - " - |
| 11. | ನಿರ್ದೇಶಕರು, ದೈಹಿಕ ಶಿಕ್ಷಣ | |

************

## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 09.10.2025 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಮಂಗಳೂರು ವಿಶ್ವವಿದ್ಯಾನಿಯದ** ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ **ನಡೆದ ಶೈಕ್ಷಣಿಕ ಮಂಡಳಿಯ 2025-26**ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ **ನಡವಳಿಗಳು.**

ಉಪಸ್ಥಿತರು:

ಅನುಪಸ್ಥಿತರು:

### ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು, ಮಾನ್ಯ ಕುಲಪತಿಯವರನ್ನು, ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳನ್ನು, ಎಲ್ಲಾ ನಿಕಾಯದ ಡೀನರುಗಳನ್ನು, ಶೈಕ್ಷಣಿಕ ಮಂಡಳಿಯ ಸದಸ್ಯರುಗಳನ್ನು, ವಿಶೇಷ ಆಹ್ವಾನಿತರುಗಳನ್ನು, ವಿಶ್ವವಿದ್ಯಾನಿಲಯದ ಆಡಳಿತ ಸಿಬ್ಬಂದಿಗಳನ್ನು ಹಾಗೂ ಪತ್ರಿಕಾ ಮಾಧ್ಯಮ ಮಿತ್ರರನ್ನು ಸಭೆಗೆ ಸ್ವಾಗತಿಸಿ, ಸಭೆಯನ್ನು ಮುಂದುವರೆಸುವಂತೆ ಕುಲಪತಿಯವರಿಗೆ ತಿಳಿಸಿದರು.

ಕುಲಪತಿಯವರು ಸಭೆಯಲ್ಲಿ ನೆರೆದ ಎಲ್ಲಾ ಸದಸ್ಯರುಗಳನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ ಸಭೆಯನ್ನು ಮುಂದುವರಿಸಿದರು.

- ಸಂತಾಪ ಸೂಚಕ ನಿರ್ಣಯ:

  ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗದ ಅಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಡೀನರು, ಶಿಕ್ಷಣ ನಿಕಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಕಿಶೋರ್ ಕುಮಾರ್ ಸಿ.ಕೆ. ಇವರು ದಿನಾಂಕ 05.10.2025ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ಮಂಗಳೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಹಾಗೂ ಕುಲಸಚಿವರಾಗಿದ್ದ ಅವಧಿಯಲ್ಲಿ ಸಿಂಡಿಕೇಟು, ಶೈಕ್ಷಣಿಕ ಮಂಡಳಿ ಹಾಗೂ ಇತರೆ ಪ್ರಾಧಿಕಾರಗಳ ಅಧ್ಯಕ್ಷರಾಗಿದ್ದು, ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುತ್ತಾರೆ. ಇವರ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯು ಅತೀವ ಸಂತಾಪವನ್ನು ವ್ಯಕ್ತಪಡಿಸಿ, ಒಂದು ನಿಮಿಷದ ಮೌನ ಪ್ರಾರ್ಥನೆಯನ್ನು ಸಲ್ಲಿಸಿ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು.

➢ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ 212 ಯುಎನ್‌ಇ 2024, ಬೆಂಗಳೂರು 30.09.2025 ರನ್ವಯ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಪರಿಷ್ಕೃತ ವೇಳಾಟ್ಟಿಯನ್ನು ಸ್ವೀಕರಿಸಲಾಗಿದ್ದು, ಇದರಂತೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ಪದವಿ ಮಟ್ಟದ ಕಾರ್ಯಕ್ರಮಗಳ ಶೈಕ್ಷಣಿಕ ವರ್ಷ 2025-26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಷ್ಕರಿಸಿಕೊಂಡು ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯನ್ನು ತಯಾರಿಸಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು.

➢ **ಸ್ವಾಗತ:**

ಸರಕಾರದ ಆದೇಶ ಸಂಖ್ಯೆ:ಆಇ/303/ರಾಲೆಪ/2025, ದಿನಾಂಕ 11.08.2025 ರಂತೆ ಶ್ರೀ ಪಂಚಲಿಂಗಸ್ವಾಮಿ ಎಸ್., ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಗಳೂರು ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯ ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಲಾಗಿರುತ್ತದೆ. ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.

I. **ದಿನಾಂಕ 18.07.2025ರಂದು ನಡೆದ ಶೈಕ್ಷಣಿಕ ಮಂಡಳಿಯ 2025-26ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.**

- ದೃಢೀಕರಿಸಲಾಯಿತು-.

II. **ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮ / ವಿನಿಯಮಗಳು**

ಏನೂ ಇರುವುದಿಲ್ಲ.

**III. ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಶೈ.ಮ.ಸಾ.ಸ.2:1 (2025-26)

**ವಿಷಯ:** ಪಿ.ಹೆಚ್.ಡಿ. ಕಾರ್ಯಕ್ರಮವನ್ನು ನಿಯಂತ್ರಿಸುವ ವಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಿ.ಹೆಚ್.ಡಿ. ಕಾರ್ಯಕ್ರಮವನ್ನು ನಿಯಂತ್ರಿಸುವ ಕರಡು ವಿನಿಯಮವನ್ನು ತಯಾರಿಸಿದ ಸಮಿತಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು. ಕರಡು ವಿನಿಯಮದ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿ, ಸಭೆಯಲ್ಲಿ ಚರ್ಚಿಸಲಾದ ಅಂಶಗಳ ಬಗ್ಗೆ ಪುನರ್‌ಪರಿಶೀಲಿಸಲು ವಿನಿಯಮ ರಚನಾ ಸಮಿತಿಯ ಅಧ್ಯಕ್ಷರಿಗೆ ಸೂಚಿಸಿ ಕರಡು ವಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ. 2:2 (2025-26)

**ವಿಷಯ:** ಕೆನರಾ ಕಾಲೇಜು, ಮಹಾತ್ಮ ಗಾಂಧಿ ರಸ್ತೆ, ಕೊಡಿಯಾಲ್‌ಬೈಲ್, ಮಂಗಳೂರು ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಸಮಿತಿಯ ವರದಿಯನ್ನು ಪರಿಗಣಿಸಿಕೊಂಡು ಸಿಂಡಿಕೇಟು ಸಭೆಯ ಅನುಮೋದನೆಗೆ ಶಿಫಾರಸ್ಸು ಮಾಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು :ಶೈ.ಮ.ಸಾ.ಸ.2:3 (2025-26)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಮೇಲಿನ ಅನುಪಾಲನಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು :ಶೈ.ಮ.ಸಾ.ಸ.2:4 (2025-26)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಮೇಲಿನ ಅನುಪಾಲನಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು :ಶೈ.ಮ.ಸಾ.ಸ.2:5 (2025-26)

**ವಿಷಯ:** 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ.

**ನಿರ್ಣಯ:** ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ.2:6 (2025-26)

**ವಿಷಯ:** ಸ್ವಾಯತ್ತ ಕಾಲೇಜುಗಳು ಪ್ರಾರಂಭಿಸಿರುವ ಹೊಸ ಕಾರ್ಯಕ್ರಮಗಳು ಮತ್ತು ಹೆಚ್ಚುವರಿ ವಿಭಾಗಗಳಿಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಸಮಿತಿಯ ವರದಿಯನ್ನು ಪರಿಗಣಿಸಿಕೊಂಡು ಸ್ವಾಯತ್ತ ಕಾಲೇಜುಗಳು ಪ್ರಾರಂಭಿಸುವ ಹೊಸ ಕಾರ್ಯಕ್ರಮಗಳು ಮತ್ತು ಹೆಚ್ಚುವರಿ ವಿಭಾಗಗಳಿಗೆ ಅನುಮತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ.2:7 (2025-26)

**ವಿಷಯ:** ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ಅನ್ವಯವಾಗುವಂತೆ ರಾಜ್ಯ ಶಿಕ್ಷಣ ನೀತಿ ಆಯೋಗದ ಮಾರ್ಗಸೂಚಿ ಪ್ರಕಾರ ತಯಾರಿಸಿರುವ IV ಸೆಮಿಸ್ಟರ್ ಬಿ.ಎ. ಪದವಿ ಕಾರ್ಯಕ್ರಮದ ರಾಜ್ಯಶಾಸ್ತ್ರ ಕೋರ್ಸಿಗೆ ಸಂಬಂಧಿಸಿದ ಎಲೆಕ್ಟಿವ್ ಕೋರ್ಸಿನ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪಠ್ಯಕ್ರಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ.2:8 (2025-26)

**ವಿಷಯ:** ಉಪನ್ಯಾಸಕರ ಕಾರ್ಯಭಾರದ ಅನುಮೋದನೆ ಬಗ್ಗೆ.

**ನಿರ್ಣಯ:** Dissertation ಗೆ ಸಂಬಂಧಿಸಿ ಕಾರ್ಯಭಾರವನ್ನು ಕನಿಷ್ಟ, ಗರಿಷ್ಠ ಮಿತಿಯನ್ನು ನಿಗದಿಪಡಿಸದೆ, ವಿಭಾಗದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಕಾರ್ಯನಿರ್ವಹಿಸುವ ಉಪನ್ಯಾಸಕರುಗಳಿಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಪ್ರಸ್ತಾವನೆಯನ್ನು ಅಧ್ಯಯನ ಮಂಡಳಿ ಸಭೆಯಲ್ಲಿ ಮಂಡಿಸಿ ತಿದ್ದುಪಡಿಗಳನ್ನು ಈ ಕಚೇರಿಗೆ ಸಲ್ಲಿಸಲು ಸಲಹೆ ನೀಡಲಾಯಿತು.

**ಇತರ ವಿಷಯಗಳು:**

1. ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗವು ವಾರ್ಷಿಕ ಪದ್ಧತಿಯ ಕಾರ್ಯಕ್ರಮಗಳನ್ನು ತಡೆಹಿಡಿದಿರುವುದರಿಂದ ಹಾಗೂ ನ್ಯಾಕ್ ಮಾನ್ಯತಾ ಸಂಸ್ಥೆಯಲ್ಲಿಯೂ ವಾರ್ಷಿಕ ಪದ್ಧತಿಯ ಕಾರ್ಯಕ್ರಮಗಳನ್ನು ಪರಿಗಣಿಸದಿರುವುದರಿಂದ ಕಾಲೇಜುಗಳಲ್ಲಿ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವ ಸಂದರ್ಭಗಳಲ್ಲಿ ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಬೇಕಾಗಿ ಎಲ್ಲಾ ನಿಕಾಯಗಳ ಡೀನರುಗಳಿಗೆ ಸಲಹೆಯನ್ನು ನೀಡಲಾಯಿತು.
2. ಸ್ನಾತಕೋತ್ತರ ಕಾರ್ಯಕ್ರಮಗಳ ಪಠ್ಯಕ್ರಮಗಳಲ್ಲಿ Dissertation/project/internship ಇಂತಹ ಕೋರ್ಸುಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಕನಿಷ್ಟ ಒಂದು ಸೆಮಿಸ್ಟರಿನಲ್ಲಿ ತರಗತಿಯೇತರ ಕಲಿಕಾ ವಿಷಯಗಳಿಗೆ ಅವಕಾಶ ಕಲ್ಪಿಸಿಕೊಡುವಲ್ಲಿ ಅಧ್ಯಯನ ಮಂಡಳಿಗಳು ಸೂಕ್ತ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿ ಸಭೆಯಲ್ಲಿ ಸಲಹೆ ನೀಡಲಾಯಿತು.

ಕೊನೆಯದಾಗಿ, ಕುಲಸಚಿವರು ಸದಸ್ಯರುಗಳ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| **ಸಹಿ/-** | **ಸಹಿ/-** |
| **ಕುಲಸಚಿವರು** | **ಕುಲಪತಿಗಳು** |